ಪದ ಬಳಸಬೇಕೋ ಬೇಡವೋ ಎಂಬಂತೆ ಒಟ್ಟು ಚಿತ್ರವೇ 'ಛಿದ್ರಗೊಂಡಂತಿದೆ' ಎಂದೆ.

ಶ್ರೀಧರ್ ಬಂಡೆಯ ಮೇಲೆ ಲೋಹದ ಅಸ್ಥಿಪಂಜರ ಅಂಟಿಸಲಾಗಿರುವುದರ ಒಡೆದ ಪ್ರತಿಮೆ ಗ್ರೀಕ್ ವೀರ ಪ್ರಮೀತಿಯಸ್‌ನದು. ದೇವತೆಗಳಿಂದ ಅಗ್ನಿಯನ್ನು ಕದ್ದು ತಂದು ಮನುಷ್ಯ ಜಗತ್ತಿಗೆ ನೀಡಿದವನ ಚಿತ್ರ ಅದು; ಆದರೂ ಈ ಪಾರ್ಕ್ ಮತ್ತು ಪ್ರತಿಮೆಯ ಹಿಂದೆ ಒಂದು ಬೆಂಕಿ–ಬದುಕಿನ ದುರಂತ ಕತೆಯಿದೆ ಎಂದರು. ಜೇಮ್ಸ್ ಸೈಮನ್ ಎಂಬ ನ್ಯೂಯಾರ್ಕ್‌ನ ಭಾರಿ ಶ್ರೀಮಂತರೊಬ್ಬರ ಮಗ. ಬೈಸಿಕಲ್ ಹತ್ತಿ ಇಲ್ಲೇ ಸ್ಟೋನಿ ಬ್ರೂಕ್‌ನ ರಸ್ತೆಯಲ್ಲಿ ರೌಂಡು ಹೊಡೆಯುತ್ತಿರುವಲ್ಲಿ ಕಾರು ಡಿಕ್ಕಿ ಹೊಡೆದದ್ದರ ನಿಮಿತ್ತ ತೀರಿಕೊಂಡ. ಸ್ಟೋನಿಬ್ರೂಕ್‌ನಲ್ಲೇ ಗಣಿತಶಾಸ್ತ್ರ ಪ್ರಾಧ್ಯಾಪಕರಾದ ಜೇಮ್ಸ್ ಸೈಮನ್ ಷೇರು ವ್ಯವಹಾರದಲ್ಲಿ ಗಳಿಸಿರುವ ಬಿಲಿಯನ್‌ಗಟ್ಟಲೆ ಹಣಕ್ಕೆ ಲೆಕ್ಕವಿಲ್ಲ. ಸ್ಟೋನಿಬ್ರೂಕ್ ವಿಶ್ವವಿದ್ಯಾನಿಲಯಕ್ಕೆ ಕೊಟ್ಟ ವಂತಿಗೆಯೇ ಇನ್ನೂರೈವತ್ತು ಬಿಲಿಯನ್ ಡಾಲರ್ ಎಂದರು.


ಅವೆಲಾನ್ ಪಾರ್ಕಿನ ಒಂದು ದೃಶ್ಯ

ಜೇಮ್ಸ್ ಸೈಮನ್ ಸೈಕಲ್ ಹೊಡೆಯುತ್ತ ತೀರಿಕೊಂಡ ಮಗನ ಹೆಸರಿನಲ್ಲಿಯೇ ಈ ಒಟ್ಟು ಪಾರ್ಕಿನ ಭೂಮಿಯನ್ನು ಕೊಂಡು ಸಾರ್ವಜನಿಕರಿಗೆ ಬಿಟ್ಟುಕೊಟ್ಟಿರುತ್ತಾರೆ. ಅಷ್ಟೇ ಅಲ್ಲದೆ, ವಿಶ್ವವಿದ್ಯಾಲಯದ ಒಳ ಆವರಣದಲ್ಲಿ ಮಕ್ಕಳು, ಹಿರಿಯರು, ಯುವಕರು ಸೈಕಲು ಹೊಡೆಯುವುದಕ್ಕಾಗಿಯೇ ಒಂದು ಬೈಸಿಕಲ್ ಪಥ ನಿರ್ಮಾಣ ಮಾಡಿಸಿದ್ದಾರೆ ಎಂದರು. ಯಾರನ್ನೂ ಭೇಟಿ ಮಾಡದ, ಮಾತನಾಡದ ಜೇಮ್ಸ್ ಸೈಮನ್, ವಿದ್ಯಾರ್ಥಿಗಳು ಕಲಿಯುವ ವಿಶ್ವವಿದ್ಯಾನಿಲಯಗಳಿಗೆ ಈವರೆಗೆ ಕೋಟ್ಯಂತರ ರೂಪಾಯಿ ಧನಸಹಾಯ ಮಾಡಿದ್ದಾರೆಂದರು. ಅಮೆರಿಕಕ್ಕೆ ಹೋಗುವ ಮುನ್ನ ನನಗೆ ಹಲಕೆಲವು ಪೂರ್ವಗ್ರಹಗಳಿದ್ದವು. ಅದರಲ್ಲಿ ಮೊದಲನೆಯದು, ಪತಿ ಪತ್ನಿಯರ ವಿಚ್ಛೇದನ. ಎರಡನೆಯದು, ಸಾಂಸಾರಿಕ ಸಂಬಂಧದಲ್ಲಿ ಒಡಕು. ಆದರೆ, ಪಾರ್ಕಿನಲ್ಲಿ ಶ್ರೀಧರ್ ಅವರು ಹೇಳಿದ ಜೇಮ್ಸ್ ಸೈಮನ್ ಅವರ ವೈರಾಗ್ಯದ ಕಥೆ ಕೇಳಿದಾಗ ಆ ಸಂಗತಿಯೆಲ್ಲ ನನ್ನ ಪೂರ್ವಗ್ರಹಕ್ಕೆ ವಿರುದ್ಧವಾಗಿದ್ದಿತು.

★★★

ಆದಿಪುರಾಣದಲ್ಲಿ ನಿಲಾಂಜನೆಯ ಸಾವನ್ನು ಕಂಡ ಆದಿ ದೇವನು ಈ ಜೀವನದ ಅನಿತ್ಯತೆಯನ್ನು ತೀವ್ರ ಮನಗಂಡು ವೈರಾಗ್ಯಪರನಾಗಿ ತನ್ನ ರಾಜ್ಯವನ್ನು ಬೇರಾರಿಗೂ ಹಂಚಲಿಲ್ಲ, ಮಕ್ಕಳಿಗೇ ಹಂಚಿದ. ಆದರೆ ಜೇಮ್ಸ್ ಸೈಮನ್‌ನ ಕಥೆ ನಮ್ಮ ಪುರಾಣಕಥೆಗಳಿಗಿಂತಲೂ ದೊಡ್ಡದಿದೆ ಎನಿಸಿತು. ಇನ್ನು, ಈ ಜೇಮ್ಸ್ ಸೈಮನ್ ಯಾರನ್ನೂ ಭೇಟಿ ಮಾಡುವುದಿಲ್ಲ ಎಂಬುದು ಏನನ್ನು ಹೇಳುತ್ತದೋ ನನಗೆ ಆ ಭಾವವನ್ನು ಗ್ರಹಿಸುವುದಾಗಲಿಲ್ಲ. ಪುತ್ರಶೋಕ ನಿರಂತರವಾದುದು ಎಂಬ ಮಾತಿದೆ.